## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 464 |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಮಾನ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 30.01.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಧಾರವಾಡ ನಗರ ಪ್ರದೇಶದಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು; | ಧಾರವಾಡ ನಗರ ಪ್ರದೇಶದಲ್ಲಿ ಒಟ್ಟು 180 ಹಾಗೂ ಹುಬ್ಬಳ್ಳಿ ನಗರ ಪ್ರದೇಶದಲ್ಲಿ 314 ಒಟ್ಟು 494 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. |
| (ಆ) | ಕಳೆದ ಮೂರು ವರ್ಷಗಳಿಂದ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಹೊಸದಾಗಿ ಮಂಜೂರು ಮಾಡಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು; ಹಾಗೂ ಅಂಗನವಾಡಿಗಳ ಮಕ್ಕಳಿಗೆ ನೀಡಲಾಗುತ್ತಿರುವ ಸೌಲಭ್ಯಗಳೇನು; | 2022-23 ನೇ ಸಾಲಿನಲ್ಲಿ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ 7 ಹೊಸ ಅಂಗನವಾಡಿ ಕೇಂದ್ರಗಳು ಮಂಜೂರಾಗಿರುತ್ತವೆ.<br>2023-24 ಮತ್ತು 2024-25 ನೇ ಸಾಲಿನಲ್ಲಿ ಯಾವುದೇ ಅಂಗನವಾಡಿ ಕೇಂದ್ರಗಳು ಮಂಜೂರಾಗಿರುವುದಿಲ್ಲ.<br>ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br>➢ ಶಾಲಾ ಪೂರ್ವ ಶಿಕ್ಷಣ.<br>➢ ಚುಚ್ಚುಮದ್ದು<br>➢ ಆರೋಗ್ಯ ತಪಾಸಣೆ<br>➢ ಮಾಹಿತಿ ಸೇವೆ<br>➢ ಶಾಲಾಪೂರ್ವ ಶಿಕ್ಷಣ<br>➢ ಪೌಷ್ಠಿಕತೆ ಮತ್ತು ಆರೋಗ್ಯ ಶಿಕ್ಷಣ |
| (ಇ) | ಕಳೆದ ಮೂರು ವರ್ಷಗಳಿಂದ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯಡಿ (PMMVY Scheme) ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು; (ವರ್ಷವಾರು ವಿವರ ನೀಡುವುದು) ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿ ಗರ್ಭಿಣಿ ಸ್ತ್ರೀಯರಿಗೆ ನೀಡಲಾಗುವ ಸೌಲಭ್ಯಗಳೇನು? | ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳ ವಿವರ (see table below) |

| 2023-24 | 2024-25 | 2025-26 | ಒಟ್ಟು | ಷರಾ |
|---|---|---|---|---|
| 2087 | 2034 | 1076 | 5197 | 1ನೇ ಗರ್ಭಿಣಿಗೆ 2 ಕಂತುಗಳಲ್ಲಿ ಒಟ್ಟು ರೂ.5000/- ಗಳು ಹಾಗೂ 02ನೆ ಹೆಣ್ಣು ಮಗುವಿಗೆ ಒಟ್ಟು ರೂ.6000/- ಗಳ ಮೊತ್ತವನ್ನು ಫಲಾನುಭವಿ ಆಧಾರ ಸಿಡಿಂಗ್ ಮಾಡಿಸಿರುವ ಬ್ಯಾಂಕ್ ಖಾತೆಗೆ ಕೇಂದ್ರ ಕಛೇರಿಯಿಂದ ನೇರನಗದು ವರ್ಗಾವಣೆ (DBT) ಮೂಲಕ ಸಂದಾಯ ಮಾಡಲಾಗುತ್ತದೆ. |

| | |
|---|---|
| | **ಮಾತೃಪೂರ್ಣ ಯೋಜನೆ**: ಗರ್ಭಿಣಿ/ಬಾಣಂತಿಯರಿಗೆ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ಮಧ್ಯಾಹ್ನದ ಬಿಸಿ ಊಟದ ಜೊತೆಗೆ ಮೊಟ್ಟೆ ಮತ್ತು ಹಾಲು ವಿತರಣೆ ಮಾಡಲಾಗುತ್ತಿದೆ. (ಆಹಾರ ಪದಾರ್ಥಗಳನ್ನು ಮನೆಗೆ ವಿತರಣೆ ಮಾಡಲಾಗುತ್ತಿದೆ)<br><br>**ಪ್ರಧಾನ ಮಂತ್ರಿ ವಂದನಾ ಯೋಜನೆ**: 1ನೇ ಗರ್ಭಿಣಿಗೆ 2 ಕಂತುಗಳಲ್ಲಿ ಒಟ್ಟು ರೂ.5000/- ಗಳು ಹಾಗೂ 02ನೆ ಹೆಣ್ಣು ಮಗುವಿಗೆ ಒಟ್ಟು ರೂ.6000/- ಗಳ ಪ್ರೋತ್ಸಾಹಧನ ಮೊತ್ತವನ್ನು ಫಲಾನುಭವಿ ಆಧಾರ ಸಿಡಿಂಗ್ ಮಾಡಿಸಿರುವ ಬ್ಯಾಂಕ್ ಖಾತೆಗೆ ನೇರನಗದು ವರ್ಗಾವಣೆ (DBT) ಮೂಲಕ ಸಂದಾಯ ಮಾಡಲಾಗುತ್ತಿದೆ.<br><br>**ಪೋಷಣ ಅಭಿಯಾನ ಯೋಜನೆ**: ಸಮುದಾಯ ಆಧಾರಿತ ಚಟುವಟಿಕೆಗಳಾದ ಸೀಮಂತ ಕಾರ್ಯಕ್ರಮದ ಮೂಲಕ ಅಂಗನವಾಡಿ ಕೇಂದ್ರ ಮಟ್ಟದಲ್ಲಿ ಗರ್ಭಿಣಿ ಸ್ತ್ರೀಯರಿಗೆ ಆರೋಗ್ಯ ಮತ್ತು ಪೌಷ್ಠಿಕತೆ ಕುರಿತು ಮಾಹಿತಿ ಹಾಗೂ ಅರಿವು ಮೂಡಿಸಲಾಗುತ್ತಿದೆ. |

**ಸಂಖ್ಯೆ: ಮಮಇ 41 ಐಸಿಡಿ 2026**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು